Sri H. SIDDAVEERAPPA.—I entirely agree with the Hon'ble Member.

Sri A. BHEEMAPPA NAIK.— In view of the feeling of the Government, will they give all necessary encouragement to that co-operative farming?

Sri H. SIDDAVEERAPPA.—Yes.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಸ್ವಾಮಿ, ತಾವೀಗ ಈ ಕೋ-ಆಪರೇಟೀವ್ ಫಾರಂಗಳಿಗೆ ಕೊಟ್ಟಿರತಕ್ಕ ಅನುಕೂಲಗಳಾವುವು?

Sri H. SIDDAVEERAPPA.—I do not think that question arises out of this.

ಶ್ರೀ ಬಿ. ಹುಚ್ಚೇಗೌಡರು.—ಈಗ ಈ ಜಮೀನನ್ನು ತಾವು ಯಾರುಯಾರಿಗೆ ಹಂಚಿಕೆಮಾಡಿದ್ದೀರೋ ಅವರೆಲ್ಲರೂ ಇದನ್ನು ಏಕೀಭವಿಸಿ ಮಾಡುತ್ತಾರೋ ಅಥವಾ ಪ್ರತ್ಯೇಕಪ್ರತ್ಯೇಕವಾಗಿ ಮಾಡುತ್ತಾರೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಒಟ್ಟಾಗಿ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಆ ಸ್ಥಳದಲ್ಲಿ ಈಗ 46, 47, 52 ಕುಂಟುಂಬಗಳಿರುತ್ತವೆಂದು ಹೇಳಿದ್ದೀರಿ. ಇವರೇನು ಅಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಿಕೊಂಡಿರತಕ್ಕವುಗಳೋ ಅಥವಾ ಮೊದಲಿನಿಂದಲೂ ಅಲ್ಲೇ ವಾಸಮಾಡಿಕೊಂಡಿದ್ದವರೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೊಸದಾಗಿ ಮನೆಗಳನ್ನು ಕಟ್ಟಿಕೊಂಡು ಇರತಕ್ಕವರು.

ಶ್ರೀ ಡಿ. ದೇವರಾಜ ಅರಸಿನವರು (ಹುಣಸೂರು).—ಹೀಗೆ ಹಂಚಲಾಗುವ ಜಮೀನುಗಳ ಬಗ್ಗೆ ಒಂದು ಪಟ್ಟಿಯನ್ನೇನಾದರೂ ಇಡಲಾಗಿದೆಯೇ? ಯಾರು ಆ ಪಟ್ಟಿ ಇಡತಕ್ಕವರು?

ಶ್ರೀ ಎಚ್. ಸಿದ್ದವೀರಪ್ಪನವರು.—ಕೋ-ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್ ಅವರು ಒಂದು ಪಟ್ಟಿಯನ್ನು ತಯಾರಿಸಿ ಇಡುತ್ತಾರೆ.

Sri D. DEVARAJA URS.—I am referring to this particular Co-operative Farming Society.

Sri H. SIDDAVEERAPPA.—The Sub-Division Officer of Davangere Sub-Division has overall control over this.

ಶ್ರೀ ಡಿ. ದೇವರಾಜಅರಸಿನವರು.—ಇದಕ್ಕೆ ಬೋರ್ಡ್ ಆಫ್ ಡೈರೆಕ್ಟರ್ಸ್ ಎಂಬುದಾಗಿ ಏನಾದರೂ ಒಂದು ಮುಂದಿಳ ಇದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು. ಇದೆ.

ಶ್ರೀ ಡಿ. ದೇವರಾಜಅರಸಿನವರು.—ಈ ಬೋರ್ಡ್ ಆಫ್ ಡೈರೆಕ್ಟರಿಗೆ ಮಾತ್ರ ಈ ಜಮೀನನ್ನು ಹಂಚುವ ಅಧಿಕಾರವಿರುತ್ತದಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

Alleged Hiring of Tractor from Government.

Q.—287. Sri S. M. MARIAPPA (Periyapatna).—Will the Government be pleased to state :—

(a) whether Sri H. M. Channabasappa of Periyapatna Taluk has bought a tractor from Government on 'Hire-Purchase System';

(b) how much he is due to Government in this behalf;

(c) whether he has paid any instalments;

(d) what are the steps taken to recover the money due?

A.—Sri H. SIDDAVEERAPPA (Minister for Home Affairs and Agriculture).—

(a) No.

(b), (c) and (d) Does not arise.

ಶ್ರೀ ಎಸ್. ಎಂ. ಮಾರಿಯಪ್ಪನವರು.—ತಾವು ಉತ್ತರದಲ್ಲಿ ಟ್ರಾಕ್ಟರುಗಳನ್ನು ಹೈರ್-ಪರ್ಚೇಸ್ ಸಿಸ್ಟಂ ಪ್ರಕಾರ ಕೊಟ್ಟಿಲ್ಲವೆಂದು ತಿಳಿಸಿದ್ದೀರಿ. ಹಾಗಾದರೆ ಮತ್ತೆ ಯಾವ ರೂಪದಲ್ಲಿ ಅವರಿಗೆ ಅದನ್ನು ಕೊಡರಾಗಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಶ್ರೀ ಎಚ್.ಎಂ. ಚನ್ನಬಸಪ್ಪನವರಿಗೆ ಯಾವ ರೂಪದಲ್ಲೂ ಟ್ರಾಕ್ಟರನ್ನು ಕೊಟ್ಟಿಲ್ಲ.

Bulldozer charges due by Sri H. M. Channabasappa

Q.—288. Sri S. M. MARIAPPA (Periyapatna).—Will the Government be pleased to state :—

(a) when Sri H. M. Channabasappa of Periyapatna Taluk applied for bulldozer to level up his lands and when he got it actually to his lands;

(b) since how long the bulldozer is with him;

(c) (i) the total acreage worked by the bulldozer and (ii) the number of hours it has worked;

(d) (i) the total amount Sri H. M. Channabasappa has paid so far and (ii) the amount he has still to pay for bulldozer charges;

(e) the steps taken to recover the amount?

A.—Sri H. SIDDAVEERAPPA (Minister for Home Affairs and Agriculture).—

(a) On 3rd May 1951.

(b) From 4th May 1951 to 12th May 1952.

(c) (i) 100 acres.
(ii) 1,221 hours.

(d) (i) Rs. 2,000.
(ii) Rs. 7,768.

(e) He has been pressed to pay up the balance early.